**ದಿನಾಂಕ 08.09.2016 ರಂದು ಸಮಯ 10.30 ಗಂಟೆಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ(KSSDA)ಯ ಹನ್ನೊಂದನೆ ಆಡಳಿತ ಪರಿಷತ್ತಿನ(Governing Council) ಸಭೆಯ ನಡವಳಿಗಳು.**

**ಹಾಜರಾತಿ: ಅನುಬಂಧ-1 ರಲ್ಲಿ ನೀಡಿದೆ**

ಸಭೆಯ ಪ್ರಾರಂಭದಲ್ಲಿ ಅಧ್ಯಕ್ಷರು, ಹಾಜರಿದ್ದ ಸದಸ್ಯರು ಹಾಗೂ ಆಮಂತ್ರಿತರನ್ನು ಯೋಜನಾ ನಿರ್ದೇಶಕರು ಕೆಎಸ್‌ಎಸ್‌ಡಿಎ ಇವರು ಸ್ವಾಗತಿಸಿದರು. ಅಧ್ಯಕ್ಷರು, ಕೆ.ಎಸ್.ಎಸ್.ಡಿ.ಎ ಆಡಳಿತ ಪರಿಷತ್ತು ಇವರ ಆದೇಶದಂತೆ ಕೆ.ಎಸ್.ಎಸ್.ಎಸ್.ಪಿ ಯೋಜನೆಯ ಜಾರಿಯ ಉದ್ದೇಶ, ಗುರಿ ಹಾಗೂ ಸಾಧನೆಗಳ ಬಗ್ಗೆ ಸಂಕ್ಷಿಪ್ತವಾಗಿ ಸಭೆಗೆ ವಿವರಿಸಲಾಯಿತು. ತದನಂತರ ಈ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

**11ನೇ ಆಡಳಿತ ಪರಿಷತ್ ಸಭೆಯ ಅಜೆಂಡದಲ್ಲಿನ ವಿಷಯಗಳನ್ನು ಚರ್ಚಿಸಿ ಕೆಳಕಾಣಿಸಿದಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.**

***ವಿಷಯ 1 : 10ನೇ ಆಡಳಿತ ಪರಿಷತ್ ಸಭೆಯ ನಡವಳಿಗಳನ್ನು ಹಾಗೂ ಅವುಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ಓದಿ ಧೃಢೀಕರಿಸಲಾಯಿತು.***

***ವಿಷಯ:2 2009-10 ರಿಂದ 2016-17ನೇ ಆಗಸ್ಟ್ ಅಂತ್ಯದವರೆಗೆ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯಡಿ ಸಾಧಿಸಿದ ಪ್ರಗತಿಯನ್ನು ಕೆಳಗಿನಂತೆ ಸಭೆಗೆ ವಿವರಿಸಲಾಯಿತು.***

ಆರ್ಥಿಕ ಪ್ರಗತಿ :

(ರೂ. ಲಕ್ಷಗಳಲ್ಲಿ)

| ಬಿಡುಗಡೆ | | | ವೆಚ್ಚ | | | |
|---|---|---|---|---|---|---|
| ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು | ಶೇಕಡ ಪ್ರಗತಿ |
| 2696.96 | 1397.59 | 4094.55 | 2364.23 | 1340.31 | 3704.53 | ಕೇಂದ್ರ: 87.66<br>ರಾಜ್ಯ:95.90<br>ಒಟ್ಟು:90.47 |

ಭೌತಿಕ ಪ್ರಗತಿ:

10ನೇ ಆಡಳಿತ ಪರಿಷತ್ತಿನ ನಂತರ ಸಾಧಿಸಲಾದ ಭೌತಿಕ ಪ್ರಗತಿಯ ವಿವರಗಳನ್ನು ಯೋಜನಾ ನಿರ್ದೇಶಕರು, ಕೆಎಸ್‌ಎಸ್‌ಡಿಎ ಇವರು ಸಭೆಗೆ ವಿವರಿಸಿದರು ನಂತರ ಹೊಸದಾಗಿ ನಿರ್ಮಿಸಲಾದ ಚಿಕ್ಕಮಗಳೂರು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಮಾನ್ಯ ಯೋಜನಾ ಸಚಿವರು ದಿನಾಂಕ: 17.10.2016ರಂದು ನಿಗಧಿಪಡಿಸಿರುವುದಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರು ಸಭೆಗೆ ತಿಳಿಸಿದರು ಹಾಗೂ ಈ ದಿನಾಂಕದ ತನಕ ಕಾಯದೇ ಕೂಡಲೇ ಕಛೇರಿಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿ ಕಛೇರಿ ಕೆಲಸವನ್ನು ಹೊಸ ಕಟ್ಟಡದಲ್ಲಿ ನಿರ್ವಹಿಸಲು ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇವರಿಗೆ ಸೂಚಿಸಿದರು.

**(ಕ್ರಮ: ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ)**

*ವಿಷಯ 3 : ಕೆಎಸ್ಎಸ್‌ಡಿಎ ಬ್ಯಾಂಕ್ ಖಾತೆಯಲ್ಲಿ ಸೃಷ್ಟಿಯಾಗಿರುವ ಬಡ್ಡಿಹಣಕ್ಕೆ ಕ್ರಿಯಾ ಯೋಜನೆ ಸಿದ್ದಪಡಿಸುವ ಬಗ್ಗೆ:*

ಕೆಎಸ್ಎಸ್‌ಡಿಎ ಬ್ಯಾಂಕ್ ಖಾತೆಯಲ್ಲಿ ಜೂನ್ 2016ರ ವರೆಗೆ ರೂ. 1,63,40,578/- ಬಡ್ಡಿ ಹಣ ಕ್ರೂಡೀಕೃತವಾಗಿದ್ದು ಅದರಲ್ಲಿ ರೂ. 86,95,408/-ಗಳನ್ನು ಖರ್ಚು ಮಾಡಲಾಗಿದ್ದು ಇನ್ನೂಳಿದ ರೂ. 76,45,170/- ಗಳು ಬ್ಯಾಂಕ್ ಖಾತೆಯಲ್ಲಿ ಉಳಿದಿದ್ದು ಸದರಿ ಮೊತ್ತಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸಲು ಸೂಚಿಸಿದರು. ಮುಂದುವರೆಯುತ್ತಾ ಭಾರತ ಸರ್ಕಾರದ ಅನುದಾನಕ್ಕೆ ಅನುಗುಣವಾಗಿ ಸೃಷ್ಟಿಯಾಗಿರುವ ಬಡ್ಡಿ ಹಣವನ್ನು ಸಾಂಖ್ಯಿಕ ವಿಷಯಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುವುದು ಎಂದು ತಿಳಿಸಿ ಕೇಂದ್ರ ಸರ್ಕಾರಕ್ಕೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಂದ ಪತ್ರ ಬರೆಯಲು ಸಭೆ ನಿರ್ಧರಿಸಿತು.

**(ಕ್ರಮ: ಯೋಜನಾ ನಿರ್ದೇಶಕರು, ಕೆಎಸ್ಎಸ್‌ಡಿಎ)**

*ವಿಷಯ 4 : ಆಡಳಿತ ಪರಿಷತ್ತಿನಿಂದ ಘಟನೋತ್ತರ ಅನುಮೋದನೆ ಪಡೆಯುವ ಬಗ್ಗೆ*

ಚಿಕ್ಕಮಗಳೂರು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಕಟ್ಟಡಕ್ಕೆ ವಿದ್ಯುತ್ ಸಂಪರ್ಕಕ್ಕಾಗಿ ಮಾರ್ಗರಚಿಸಿ ಟ್ರಾನ್ಸ್ ಫಾರ್ಮರ್ ಅಳವಡಿಸುವ ಕಾಮಗಾರಿಗೆ ರೂ.4.98 ಲಕ್ಷಗಳಿಗೆ ಕಡತ ಸಂಖ್ಯೆ ಆಸಾಂನಿ/04/ಕೆಎಸ್ಎಸ್‌ಡಿಎ/2013ರ ಕಂಡಿಕೆ 199 ರಲ್ಲಿ ಅನುಮೋದನೆ ಪಡೆದಿದ್ದು ಇದಕ್ಕೆ ಆಡಳಿತ ಪರಿಷತ್ತು ಘಟನೋತ್ತರ ಅನುಮೋದನೆ ನೀಡಿತು.

**(ಕ್ರಮ: ಯೋಜನಾ ನಿರ್ದೇಶಕರು, ಕೆಎಸ್ಎಸ್‌ಡಿಎ)**

*ವಿಷಯ 5 : ಕೆ.ಎಸ್.ಎಸ್.ಡಿ.ಎ. ಕಚೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಇಬ್ಬರು ಕಂಪ್ಯೂಟರ್ ಆಪರೇಟರ್ಸ್ ಹಾಗೂ ಮೂವರು ಸಮೂಹ ಡಿ ನೌಕರರನ್ನು ಪಡೆಯುವ ಕುರಿತು:*

2016ನೇ ನವೆಂಬರ್ ನಂತರದ ಅವಧಿಗೆ ಹೊಸದಾಗಿ ಟೆಂಡರ್ ಕರೆಯುವ ಮೂಲಕ ಪ್ರಕ್ರಿಯೆ ಕೈಗೊಂಡು ಇಬ್ಬರು ಕಂಪ್ಯೂಟರ್ ಆಪರೇಟರ್ಸ್ ಹಾಗೂ ಮೂವರು ಸಮೂಹ ಡಿ ನೌಕರರನ್ನು ನೇಮಕ ಮಾಡಿಕೊಳ್ಳಲು ಅಧ್ಯಕ್ಷರು ಸೂಚಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ಕೆಎಸ್ಎಸ್‌ಡಿಎ)**

*ವಿಷಯ 6 : 2015-16ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುವ ಕುರಿತು.*

2015-16ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಆಡಳಿತ ಪರಿಷತ್ತಿನ ಸಭೆಗೆ ಮಂಡಿಸಲಾಯಿತು ಹಾಗೂ ಅನುಮೋದನೆ ಪಡೆಯಲಾಯಿತು.

***ವಿಷಯ 7 : ಇನ್ನಿತರ ವಿಷಯಗಳು:***

ಕೆಎಸ್‌ಎಸ್‌ಡಿಎ ವತಿಯಿಂದ 2011 ಹಾಗೂ 2012ನೇ ಸಾಲಿನಲ್ಲಿ 4153 ಮಿನಿಲ್ಯಾಪ್‌ಟಾಪ್‌ಗಳನ್ನು ಖರೀದಿಸಿ 176 ತಾಲ್ಲೂಕುಗಳಿಗೆ ವಿತರಿಸಲಾಗಿರುತ್ತದೆ. ಈ ವಿಷಯದ ಬಗ್ಗೆ ಚರ್ಚೆಯಾಗಿ ಲ್ಯಾಪ್‌ಟಾಪ್‌ಗಳನ್ನು ಖರೀದಿಸುವಾಗ ಖರೀದಿ ನಿಯಮಗಳನ್ನು ಪಾಲಿಸಲಾಗಿದೆಯೇ? ಎಂಬುದನ್ನು ಹಿಂದಿನ ಕಡತಗಳಿಂದ ಪರಿಶೀಲಿಸಿ ವಿವರವಾದ ವರದಿಗಳನ್ನು ಕಡತದಲ್ಲಿ ಮಂಡಿಸುವಂತೆ ಯೋಜನಾ ನಿರ್ದೇಶಕರಿಗೆ ಸೂಚಿಸಲಾಯಿತು. ಮುಂದುವರೆಯುತ್ತಾ ಮಿನಿಲ್ಯಾಪ್‌ಟಾಪ್‌ಗಳನ್ನು ಖರೀದಿಸುವಾಗ ಖರೀದಿಯ ನಿಯಮಗಳನ್ನು ಪಾಲಿಸುವಲ್ಲಿ ಲೋಪದೋಷಗಳು ಕಂಡು ಬಂದಲ್ಲಿ ಇದಕ್ಕೆ ಕಾರಣರಾದವರ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳಲು ಸಭೆಯು ತೀರ್ಮಾನಿಸಿತು.

**(ಕ್ರಮ: ಯೋಜನಾ ನಿರ್ದೇಶಕರು, ಕೆಎಸ್‌ಎಸ್‌ಡಿಎ)**

(ಡಾ॥ರಜನೀಶ್ ಗೋಯಲ್)
ಅಧ್ಯಕ್ಷರು, ಕೆಎಸ್‌ಎಸ್‌ಡಿಎ ಆಡಳಿತ ಪರಿಷತ್ತು
ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಸಂಖ್ಯೆ: ಆಸಾಂನಿ 49 ಕೆಎಸ್‌ಎಸ್‌ಡಿಎ 2016 ದಿನಾಂಕ:08.09.2016

ಸಂಬಂಧಿಸಿದ ಎಲ್ಲಾ ಅಧಿಕಾರಿಗಳು

ದಿನಾಂಕ 08.09.2016 ರಂದು 10.30 ಘಂಟೆಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ(KSSDA)ಯ 11ನೇ ಆಡಳಿತ ಪರಿಷತ್ತಿನ(Governing Council) ಸಭೆಯಲ್ಲಿ ಹಾಜರಿದ್ದ ಸದಸ್ಯರ ವಿವರ.

ಅನುಬಂಧ – 1

| | | |
|---|---|---|
| 1. | **ಡಾ॥ ರಜನೀಶ್ ಗೋಯಲ್,**<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,<br>ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, | ಅಧ್ಯಕ್ಷರು |
| 2. | **ಶ್ರೀ ಹೆಚ್.ಇ.ಕೃಷ್ಣಮೂರ್ತಿ,**<br>ಉಪ ನಿರ್ದೇಶಕರು,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ನಗರಾಭಿವೃದ್ಧಿ ಇಲಾಖೆ ಇವರ ಪರವಾಗಿ | ಸದಸ್ಯರು |
| 3. | **ಶ್ರೀ ಎಸ್. ಮಹಾದೇವ**<br>ಶಾಖಾಧಿಕಾರಿ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಮಾಧ್ಯಮಿಕ) ಇವರ ಪರವಾಗಿ | ಸದಸ್ಯರು |
| 4. | **ಶ್ರೀ ಎಸ್.ಬಿ. ರುದ್ರಪ್ಪ**<br>ಉಪ ಕಾರ್ಯದರ್ಶಿ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಕೃಷಿ ಇಲಾಖೆ, ಇವರ ಪರವಾಗಿ | ಸದಸ್ಯರು |
| 5. | **ಶ್ರೀ ಜಯಕುಮಾರ್ ಹೆಚ್.ಎಸ್.**<br>ಉಪ ನಿರ್ದೇಶಕರು, (TC)<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಇವರ ಪರವಾಗಿ | ಸದಸ್ಯರು |
| 6. | **ಶ್ರೀ ಯು.ಹೆಚ್. ನಾರಾಯಣ ಸ್ವಾಮಿ**<br>ಉಪ ಕಾರ್ಯದರ್ಶಿ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಪರಿಸರ, ಜೀವಿಶಾಸ್ತ್ರ ಮತ್ತು ಅರಣ್ಯ ಇಲಾಖೆ, ಇವರ ಪರವಾಗಿ | ಸದಸ್ಯರು |
| 7. | **ಶ್ರೀಮತಿ ವರಲಕ್ಷ್ಮಿ**<br>ಉಪ ನಿರ್ದೇಶಕರು (ಪ್ರ)<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, | ಸದಸ್ಯರು |
| 8. | **ಶ್ರೀ ರಾಜಶೇಖರ್ ಎಂ.ಜಿ.**<br>ಶಾಖಾಧಿಕಾರಿ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಕಂದಾಯ ಇಲಾಖೆ, ಇವರ ಪರವಾಗಿ | ಸದಸ್ಯರು |
| 9. | **ಶ್ರೀ ಕೆ.ವಿ.ಸುಬ್ರಮಣ್ಯಂ**<br>ನಿರ್ದೇಶಕರು,<br>ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ | ಸದಸ್ಯರು |
| 10. | **ಶ್ರೀ ಕೆ.ಎಸ್.ಶಂಕರ್,**<br>ಯೋಜನಾ ನಿರ್ದೇಶಕರು,<br>ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ (ಕೆಎಸ್ಎಸ್‌ಡಿಎ) | ಸದಸ್ಯ ಕಾರ್ಯದರ್ಶಿ |

**ಗೈರು ಹಾಜರಾದ ಸದಸ್ಯರ ಪಟ್ಟಿ.**

| | | |
|---|---|---|
| 1. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ), | **ಸದಸ್ಯರು** |
| 2. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, | **ಸದಸ್ಯರು** |
| 3. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ತೋಟಗಾರಿಕೆ ಇಲಾಖೆ, | **ಸದಸ್ಯರು** |
| 4. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ, | **ಸದಸ್ಯರು** |

**ಹಾಜರಾದ ಆಮಂತ್ರಿತರ ಪಟ್ಟಿ.**

1. **ಶ್ರೀ ರಾಜೀವ್ ರಂಜನ್,**
   ಸರ್ಕಾರದ ಕಾರ್ಯದರ್ಶಿಗಳು,
   ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ,
2. **ಶ್ರೀ ಎ.ಆರ್. ವಿಜಯೇಂದ್ರ**
   ಅಪರ ನಿರ್ದೇಶಕರು,
   ಕಾರ್ಖಾನೆ, ಬಾಯ್ಲರುಗಳ ನಿರ್ದೇಶನಾಲಯ,
3. **ಶ್ರೀ ವಿ. ವಿಜಯಕುಮಾರ್ ಶೆಟ್ಟಿ**
   ಜಂಟಿ ನಿರ್ದೇಶಕರು,
   ಸಿ.ಐ.ಎಸ್. ವಿಭಾಗ
   ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
4. **ಶ್ರೀ ಕೆ. ಸಿದ್ಧರಾಜು**
   ಜಂಟಿ ನಿರ್ದೇಶಕರು,
   ಎಸ್.ಐ.ಪಿ. ವಿಭಾಗ
   ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
5. **ಶ್ರೀ ಕೆ. ವಿ.ರಘುರಾಮ ರೆಡ್ಡಿ**
   ಜಂಟಿ ನಿರ್ದೇಶಕರು,
   ಪಿ.ಟಿ.ಸಿ. ವಿಭಾಗ
   ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
6. **ಶ್ರೀ ಚಿಕ್ಕಸುಬ್ಬಯ್ಯ**
   ಜಂಟಿ ನಿರ್ದೇಶಕರು,
   ಎ.ಆರ್.ಸಿ. ವಿಭಾಗ
   ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
7. **ಶ್ರೀ ಎಸ್.ಓ. ನಾರಾಯಣಪ್ಪ**
   ಜಂಟಿ ನಿರ್ದೇಶಕರು,
   ಸಿ.ಎನ್.ಎಲ್. ವಿಭಾಗ
   ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
8. **ಶ್ರೀ ಬಾಲರಾಜು**
   ಜಂಟಿ ನಿರ್ದೇಶಕರು,
   ಎ.ಜಿ.ಎಸ್. ವಿಭಾಗ
   ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ